(SRI K. HANUMANTHAIYA.)

(*c*) The following amounts have been spent on the Dam and Canal area:—

	1953-54 (6 months)	*1954-55*	
Canal Works ...	1·49	6·52	
Dam Works—			
Irrigation	16·42	31·13	†
Electrical ...	3·37	9·25	

ಶ್ರೀ ಪಿ. ಆರ್. ರಾಮಯ್ಯ.—ತಾವಿಲ್ಲಿ ಕೊಟ್ಟಿರುವ ಉತ್ತರದಲ್ಲಿ ಡಿಫಿಸಿಟ್ ಎಷ್ಟಿದೆಯೆಂದು ಗೊತ್ತಾಗುವುದಿಲ್ಲ. ಅದನ್ನು ತಿಳಿಸುತ್ತೀರಾ?

*ಶ್ರೀ ಕೆ ಹನುಮಂತಯ್ಯ.- ಅಲ್ಲಿ ಕೊಟ್ಟಿರುವುದನ್ನು ಕೂಡಿ ಕಳೆದರೆ ಗೊತ್ತಾಗುತ್ತದೆ. 1953-5 ರಲ್ಲಿ ಆದಾಯ 47·09 ಲಕ್ಷ ಇದೆ. ಒಟ್ಟು ಖರ್ಚು 31·67+24·45 ಲಕ್ಷ= 56 ಲಕ್ಷ ಚಿಲ್ಲರೆ ಆಗುತ್ತದೆ. 1954-55ರಲ್ಲಿ 80 ಲಕ್ಷ ಚಿಲ್ಲರೆ ಆದಾಯವೂ, 122 ಲಕ್ಷ ಚಿಲ್ಲರೆಯಷ್ಟು ಖರ್ಚೂ ಆಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಅಂದರೆ 1954-55 ರಲ್ಲಿ 30 ಲಕ್ಷ ರೂಪಾಯಿಗಳಷ್ಟು ಖರ್ಚು ಹೆಚ್ಚಾಗಿದೆಯೆಂದು ತಿಳಿದುಕೊಳ್ಳಬಹುದೇ?

ಶ್ರೀ ಕೆ. ಹನುಮಂತಯ್ಯ.—ಅದನ್ನು ಮೊದಲು ನಿಂದಲೂ ನನ್ನ ಬಡ್ಜೆಟ್ ಭಾಷಣದಲ್ಲೇ ಹೇಳಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ತಾವೀಗ ಹೆಚ್ಚಿಗೆ ತೆರಿಗೆಗಳನ್ನು ಹಾಕಿರುವುದರಲ್ಲಿ ಏನಾದರೂ ಹೆಚ್ಚಿಗೆ ಆದಾಯ ಬರುವಂತಿದೆಯೆ?

ಶ್ರೀ ಕೆ. ಹನುಮಂತಯ್ಯ.—ತಾವು ಯಾವುದಾದ ತೆರಿಗೆಗಳ ನ್ನುಬಂಧವಾಗಿ ಹೇಳುತ್ತಿದ್ದೀರಿ?

ಶ್ರೀ ಪಿ. ಆರ್. ರಾಮಯ್ಯ.—ಈಗ ತಾವು ಹೆಚ್ಚಿಗೆ ಅಗ್ರಿಕಲ್ಚರರ್ ಇಕಂಟ್ಯಾಕ್ಸ್ ಹಾಕಿದ್ದೀರಲ್ಲಾ. ಅದರಿಂದಾಗಿ ಹೆಚ್ಚಿಗೆ ಆದಾಯ ಬರಲು ಅನುಕೂಲವಾಗಿದೆಯೇ?

ಶ್ರೀ ಕೆ. ಹನುಮಂತಯ್ಯ.—ಅಗ್ರಿಕಲ್ಚರರ್ ಇಕಂಟ್ಯಾಕ್ಸನ್ನು ಇನ್ನೂ collect ಮಾಡಿಲ್ಲ.

Second Five-Year Plan.

Q.—468 **Sri Mulka GOVINDA REDDY** (Chitaldrug).—Will the Government be pleased to state:—

(*a*) whether they have prepared any blue print for the Second Five-Year Plan;

(*b*) if so, what is the Plan framed;

(*c*) how do they propose to provide funds for the same?

A.—**Sri K. HANUMANTHAIYA** (Chief Minister).—

(*a*) Yes.

(*b*) Printed copies of the Plan have been distributed.

(*c*) The funds will be obtained from the Centre as grants and loans.

Sri Mulka GOVINDA REDDY.—I have no supplementaries.

Personal Assistants to Ministers.

Q.—616. **Sri J. NARAYANAPPA** (Chintamani—Scheduled Castes).—

Will the Government be pleased to state:—

(*a*) who were the Personal Assistants to the previous Ministers from 1947 to 1952;

(*b*) (i) the appointments held by them when they were Personal Assistants; (ii) the appointments they are holding after being relieved from their duty as Personal Assistants;

(*c*) whether all the orders passed by the previous Ministry pertaining to their appointments are given effect to?

A.—**Sri K. HANUMANTHAIYA** (Chief Minister).—

(*a*) (1) Sri D. Rajagopal, B.A., Personal Assistant to Chief Minister.

(2) Sri K. Subba Rao, Personal Assistant to the Minister for Law.

(3) Sri P. Ramappa, B.Sc., B.Com., Personal Assistant to the Minister for Finance.

(4) Sri D. S. Sidde Gowda, B.Sc., Personal Assistant to the Minister for Home.

(5) Sri T. S. Puttasomaradhya, B.Sc., Personal Assistant to the Minister for Revenue and Public Works.

(6) Sri C. Rachaiah, B.A., Personal Assistant to the Minister for Public Health and Local Self-Government.

(*b*) (i) Sri D. Rajagopal was, after relief in the Mysore Akashavani, where he was acting as Director, taken as

†Amounts paid to the Tungabhadra Board as this Government's share of the outlay on the Project.

Personal Assistant to the Chief Minister.

Sri K. Subba Rao, was Personal Assistant to Sri M. Seshadri as Minister. He is a I Division Clerk in the Revenue Commissioner's Office.

Sri [illegible] Ramappa was a I Division Clerk in the Secretariat.

Sri D. S. Sidde Gowda was a I Division Clerk in the Revenue Department.

Sri T. S. Puttasomaradhya was a I Division Clerk in the Revenue Commissioner's Office.

Sri C. Rachaiah was an Amildar.

(ii) Sri D. Rajagopal was posted as Registrar, Mysore Government Secretariat.

Sri K. Subba Rao was promoted and posted as Personal Assistant to the Labour Commissioner on tenure basis.

Sri P. Ramappa was promoted on tenure basis and posted as Personal Assistant to the Chairman, City Improvement Trust Board.

Sri D. S. Sidde Gowda was promoted and posted as Secretary, Flying Training School on a tenure basis.

Sri T. S. Puttasomaradhya was promoted and posted as Secretary to the Hospitals in the Civil Area.

Sri C. Rachaiah was sent to U.S.A. for undergoing training in Labour Administration and on his return he was posted as Assistant Director of Employment Exchange.

(c) Yes.

ಶ್ರೀ ಜೆ. ನಾರಾಯಣಪ್ಪ.—ಪರ್ಸನಲ್ ಅಸಿಸ್ಟಂಟರುಗಳಾಗಿದ್ದವರೆಲ್ಲರಿಗೂ ಈಗ ಅಸಿಸ್ಟೆಂಟ್ ಕಮಿಷನರ ಚಾರ್ಜನ್ನು ಕೊಟ್ಟಿದ್ದೀರಿ ಅಲ್ಲವೆ ?

*ಶ್ರೀ ಕೆ. ಹನುಮಂತಯ್ಯ.—ಇಲ್ಲೇ ವಿವರಗಳನ್ನು ಕೊಟ್ಟಿದ್ದೇನೆ. ಯಾವ ಯಾವ ಕೆಲಸ ಯಾರಾರಿಗೆ ಕೊಟ್ಟಿದೆಯೆಂಬುದು ಅದರಿಂದ ಗೊತ್ತಾಗುತ್ತದೆ.

ಶ್ರೀ ಜೆ. ನಾರಾಯಣಪ್ಪ.—ಇಲ್ಲಿ ಕೆ. ಸುಬ್ಬರಾಯರು ಎಂಬುವರ ಹೆಸರು ಕೊಟ್ಟಿದ್ದೀರಲ್ಲಾ, ಅವರು ಯಾವ ಡಿಗ್ರಿ ಪಡೆದಿದ್ದಾರೆ, ಅವರಿಗಿರತಕ್ಕ ಕ್ವಾಲಿಫಿಕೇಷನ್ ಏನೇನು ? ಅವರು ಗ್ರಾಜುಯೇಟ್ ಆಗಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಈಗ ನನಗೆ ಗೊತ್ತಿಲ್ಲ. ಅವರುಗಳ ಕ್ವಾಲಿಫಿಕೇಷನ್‌ಗಳನ್ನು ಕೇಳಿದಿರುವುದರಿಂದ ಕೊಟ್ಟಿಲ್ಲ. ಬೇಕಾದರೆ ತಿಳಿಸಿ ಹೇಳುತ್ತೇನೆ.

ಶ್ರೀ ಜೆ. ನಾರಾಯಣಪ್ಪ.—ಎಲ್ಲರ ಕ್ವಾಲಿಫಿಕೇಷನ್ನೂ ಕೊಟ್ಟಿದ್ದಾರೆ; ಅವರದು ಮಾತ್ರ ಕೊಟ್ಟಿಲ್ಲ. ಅವರಿಗೂ ಕ್ವಾಲಿಫಿಕೇಷನ್ ಇದ್ದಿದ್ದರೆ ಅದನ್ನಿಲ್ಲಿ ಸೂಚನೆ ಮಾಡುತ್ತಿರಲಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಕ್ವಾಲಿಫಿಕೇಷನ್ ಇದೆ. ಬಿ.ಎ, ಡಿಗ್ರಿ ಮಾಡಿದರೇನೇ ಕ್ವಾಲಿಫಿಕೇಷನ್ ಇದೆಯೆಂದು ತಿಳಿದುಕೊಳ್ಳಬೇಡಿ.

ಶ್ರೀ ಜೆ. ನಾರಾಯಣಪ್ಪ.—ಕೇವಲ ಕ್ಲಾರ್ಕ್ ಆಗಿದ್ದವರಿಗೆ ಅಸಿಸ್ಟೆಂಟ್ ಕಮಿಷನರ ಹುದ್ದೆಯನ್ನು ಕೊಟ್ಟಿದಿರಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಇಲ್ಲೇ ವಿವರಗಳನ್ನು ಕೊಟ್ಟಿದೆ.

ಶ್ರೀ ಜೆ. ನಾರಾಯಣಪ್ಪ.—ನನ್ನ (c) ಪ್ರಶ್ನೆಗೆ ಉತ್ತರವಾಗಿ 'Yes' ಎಂದು ಹೇಳಿದ್ದೀರಿ. ಅದರಂತೆ ಈಗ ಎಲ್ಲಾ ಪರ್ಸನಲ್ ಅಸಿಸ್ಟೆಂಟರೂ ಅಸಿಸ್ಟೆಂಟ್ ಕಮಿಷನರ ಚಾರ್ಜಿನಲ್ಲಿದ್ದಾರೆಯೆ ?

ಶ್ರೀ ಕೆ. ಹನುಮಂತಯ್ಯ.—ಆ ಪ್ರಶ್ನೆ ಉದ್ಭವಿಸುವುದಿಲ್ಲ ಪರ್ಸನಲ್ ಅಸಿಸ್ಟೆಂಟರೆಲ್ಲಾ ಅಸಿಸ್ಟೆಂಟ್ ಕಮಿಷನರಾಗುವುದಿಲ್ಲ. ಸೀನಿಯಾರಿಟಿ, ಅರ್ಹತೆ ಅವುಗಳನ್ನು ನೋಡಿಕೊಂಡು ಕೊಡುತ್ತಾರೆ

ಶ್ರೀ ಜೆ. ನಾರಾಯಣಪ್ಪ.—ರಾಮಯ್ಯ ಎಂಬ ಹೆಸರುಳ್ಳವರು ಅವೇರಿಕಕ್ಕೆ ಹೋಗಿ ಬಂದು ಅಮಲ್ದಾರರ ಚಾರ್ಜಿನಲ್ಲಿದ್ದು ಪರ್ಸನಲ್ ಅಸಿಸ್ಟೆಂಟರಾಗಿದ್ದರು, ಅವರಿಗೇಕೆ ಅಸಿಸ್ಟೆಂಟ್ ಕಮಿಷನರ ಹುದ್ದೆ ಕೊಟ್ಟಿಲ್ಲ ?

ಶ್ರೀ ಕೆ. ಹನುಮಂತಯ್ಯ.—ಅವರಿಗೆ ಸೀನಿಯಾರಿಟಿ ಬಂದಿಲ್ಲ; ಅದರಿಂದ ಕೊಟ್ಟಿಲ್ಲ. ಸೀನಿಯಾರಿಟಿ ಬಂದ ತಕ್ಷಣ ಕೊಡುತ್ತೇವೆ.

ಶ್ರೀ ಜೆ. ನಾರಾಯಣಪ್ಪ.—ಅವರು ಹರಿಜನರಲ್ಲಿಯೇ ಮೊದಲನೆಯ ಗ್ರಾಜ್ಯುಯೇಟ್ ಎಂಬುದು ಗೊತ್ತೆ ?

ಶ್ರೀ ಕೆ. ಹನುಮಂತಯ್ಯ.—ಮೊದನೆಯ ಗ್ರಾಜ್ಯುಯೇಟ್ ಅವರಲ್ಲ; ಡಿಪ್ರೆಸ್ಡ್ ಕ್ಲಾಸ್ ಕಮಿಷನರಾಗಿದ್ದ ರಾಮಯ್ಯನವರು ಮೊದನೆಯ ಗ್ರಾಜ್ಯುಯೇಟ್ ಎಂದು ನಾನು ತಿಳಿದಿದ್ದೇನೆ.

ಶ್ರೀ ಜೆ. ನಾರಾಯಣಪ್ಪ.—ಹರಿಜನರಲ್ಲಿ ಎಡಗೈ ಬಲಗೈ ಎಂದು ಎರಡು ಪಂಗಡಗಳಿವೆಯೆಂದು ಹೇಳುತ್ತಾರೆ. ಅದರಪ್ಪೆಕಿ ಈ ಸಿ. ರಾಮಯ್ಯನವರು ಎಡಗೈ ಪಂಗಡದವರಾಗಿ ಮೊದಲನೆಯ ಗ್ರಾಜುಯೇಟ್ ಎಂದು ನಾನು ಹೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಹಾಗೆ ಹೇಳಬೇಡಿ.

ಶ್ರೀ ಜಿ. ದುಗ್ಗಪ್ಪ.—ಹಿಂದಿನ್ನ ಮಂತ್ರಿಗಳ ಹತ್ತಿರ ಪರ್ಸನಲ್ ಅಸಿಸ್ಟೆಂಟರಾಗಿದ ವರ್ನೆಲ್ಲಾ ಅಸಿಸ್ಟೆಂಟ್ ಕಮಿಷನರಾಗಿ ಪ್ರಮೋಷನ್ ಕೊಟ್ಟು ರಾಮಯ್ಯನವರನ್ನು ಮಾತ್ರ ಬಿಟ್ಟರು ಅಂದರೆ, ಪ್ರಮೋಷನ್ ಕೊಟ್ಟವರಿಗೆ ಯಾವ ಯಾವ ಆಧಾರಗಳನ್ನನುಸರಿಸಿ ಯಾವ ಯಾವ ಅರ್ಹತೆಗಳನ್ನು ನೋಡಿಕೊಟ್ಟರು ?

ಶ್ರೀ ಕೆ. ಹನುಮಂತಯ್ಯ.—ವಿವರಗಳನ್ನು ಕೊಟ್ಟಿದೆ.

ಶ್ರೀ ಜಿ. ದುಗ್ಗಪ್ಪ.—ಇವರಿಗೆ ಆ ಅರ್ಹತೆಗಳು ಯಾವುದೂ ಇರಲಿಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಅವರಿಗೆ ಏನೇನು ಕ್ವಾಲಿಫಿಕೇಷನ್‌ಗಳಿದ್ದವೋ ಎಷ್ಟು ಸೀನಿಯಾರಿಟಿ ಇತ್ತೋ ಅವನ್ನು ನೋಡಿ ಕೊಟ್ಟಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ರಾಮಯ್ಯನವರನ್ನು ಪರದೇಶಕ್ಕೆ ಕಳುಹಿಸುವಾಗ ಪ್ರಮೋಷನ್ ಕೊಟ್ಟು ಕಳುಹಿಸಿದ್ದರೇ ? ಹೇಗೆ ಕಳುಹಿಸಿದ್ದಿರಿ ?

ಶ್ರೀ ಕೆ. ಹನುಮಂತಯ್ಯ.—ನೊಟೀಸ್.

ಶ್ರೀ ಜಿ. ದುಗ್ಗಪ್ಪ.—ಅವರನ್ನು ಯಾವ ವಿಚಾರವಾಗಿ ತರಬೇತು ಹೊಂದುವುದಕ್ಕೆ ಪರದೇಶಕ್ಕೆ ಕಳುಹಿಸಿದರೋ, ಅವರು ಅಲ್ಲಿಂದ ಬಂದಮೇಲೆ ಅವರು ಶಿಕ್ಷಣ ಪಡೆದಿದ್ದಂಥಾವನ್ನು ಉಪಯೋಗ ಮಾಡಿಕೊಳ್ಳುವಂಥ

(ಶ್ರೀ ಜಿ. ದುಗ್ಗಪ್ಪ.)

ಹುದ್ದೆಗೆ ನೇಮಕ ಮಾಡಿದ್ದೀರಾ ಅಥವಾ ಇನ್ನಾವ ಹುದ್ದೆಗೋ ನೇಮಕ ಮಾಡಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಅವರನ್ನು ಉಪಯೋಗವಾಗುವ ರೀತಿಯಲ್ಲಿಯೇ ನೇಮಕ ಮಾಡಿದ್ದೇವೆ.

Irrigation Project (Hassan District).

Q.—65. **Sri H. K. SIDDAIYA** (Belur—Scheduled Castes).—

Will the Government be pleased to state :—

(*a*) the amount of expenditure for the scheme of irrigation in the State during the last five years ;

(*b*) whether any irrigation project by constructing dams to any of the rivers in Hassan District has been taken up ;

(*c*) the details of the projects ?

A.—**Sri K. HANUMANTHAIYA** (Chief Minister) [On behalf of Sri Kadidal MANJAPPA (Minister for Revenue and Public Works)].—

(*a*) Rs. 1,411·00 lakhs (under the Five-Year Plan).

(*b*) No.

(*c*) Does not arise in view of reply to (*b*).

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಯಾವುದಾದರೂ ನದಿಗಳಿಗೆ ಅಣೆಗಳನ್ನು ಕಟ್ಟುವುದರ ಮೂಲಕ ನೀರಾವರಿಗೆ ಸಂಬಂಧಪಟ್ಟ ಯಾವುದಾದರೂ ಯೋಜನೆಗಳನ್ನು ಕೈಕೊಳ್ಳಲಾಗಿದೆಯೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳವರೇ ಆಲೂರು ತಾಲ್ಲೂಕು, ಪಾಳ್ಯ ಹೋಬಳಿ ಕೃಷ್ಣಾಪುರದ ಹತ್ತಿರ ಹರಿಯುವ ಪಾಚೆ ಹಳ್ಳಕ್ಕೆ ಒಂದು ಕಟ್ಟೆಯನ್ನು ಕಟ್ಟಿಸಿಕೊಡುವುದಾಗಿ ಹೇಳಿ ನನಗೆ ಕಾಗದ ಮುಖೇನ ಭರವಸೆ ಕೊಟ್ಟಿರುವುದು ಜ್ಞಾಪಕದಲ್ಲಿದೆಯೇ ?

*ಶ್ರೀ ಕೆ. ಹನುಮಂತಯ್ಯ.—ಏನು ಕಾಗದ ಬರೆದಿದ್ದರೋ ಗೊತ್ತಿಲ್ಲ. ದಯವಿಟ್ಟು ಅದನ್ನು ಕೊಡಿ, ನೋಡೋಣ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಅಸೆಂಬ್ಲಿಯನ್ನು ಮಂಜೂರು ಮಾಡಿದ್ದ ಸಾಧಿರಾರು ಎಕರೆಗಳಿಗೆ ನೀರು ಸರಬರಾಜಾಗುವುದರಿಂದ ಇದನ್ನು ಅನುಕೂಲಪಡಿಸುವ ಒಂದು ಭರವಸೆ ಕೊಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ನಾನು ತಮಗೆ ಏನು ಉತ್ತರವನ್ನು ಕಾಗದದಲ್ಲಿ ಬರೆದುಕೊಟ್ಟಿರುತ್ತೇನೋ ಅದನ್ನು ತಾವು ತೆಗೆದುಕೊಂಡು ಬನ್ನಿ. ಅದನ್ನು ನೋಡಿ ಅನಂತರ ಮಾತನಾಡೋಣ.

Koravangala Amrit Mahal Kaval (Lands released for Harijan Colony).

Q.—71. **Sri H. K. SIDDAIYA** (Belur—Scheduled Castes).—

Will the Government be pleased to state :—

the action taken by them to grant 300 acres of land surrendered to Revenue Department in Koravangala Amrit Mahal Kaval, Hassan Taluk to Harijans for forming an agricultural colony consisting of 40 poor landless Harijan families ?

A.—**Sri H. M CHANNABASAPPA** (Minister for Industries) [On behalf of Sri Kadidal MANJAPPA (Minister for Revenue and Public Works)].—

The matter is under consideration of Government.

ಶ್ರೀ ಎಚ್. ಕೆ. ಸಿದ್ದಯ್ಯ.—ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ವಿಚಾರ ಪರಿಶೀಲನೆಯಲ್ಲಿದೆ ಎಂದು ತಿಳಿಸೋಣವಾಗಿದೆ. ಹೀಗೆ ಎಷ್ಟು ದಿವಸಗಳಿಂದ ಈ ವಿಷಯ ತಮ್ಮ ಪರಿಶೀಲನೆಯಲ್ಲಿ ಇದೆಯೆ ?

*ಶ್ರೀ ಎಚ್.ಎಂ. ಚನ್ನಬಸಪ್ಪ.—ತಾವು ಅರ್ಜಿಕೊಟ್ಟ ದಿವಸದಿಂದಲೂ ಅದು ಪರಿಶೀಲನೆಯಲ್ಲಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಗಾದರೆ ಇದು ಬಗೆಹರಿಯುವುದು ಎಂದಿಗೆ ?

ಶ್ರೀ ಎಚ್. ಎಂ ಚೆನ್ನಬಸಪ್ಪ.—ಮಾನ್ಯ ಸದಸ್ಯರು ಕೆಲವು ತಿಂಗಳ ಕೆಳಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಅರ್ಜಿಯ ಕಚ್ಚೆಲ್ಲಾ ರೆವಿನ್ಯೂ ಕಮಿಷನರ ಆಫೀಸಿನಿಂದ ಸರ್ಕಾರಕ್ಕೆ ಬಂದಿರುವುದರಿಂದ ತಾವು ಈಗಲಾದರೂ ಆದಷ್ಟು ಬೇಗ ಈ ವಿಚಾರದಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಇನ್ನು ಎಷ್ಟು ದಿವಸಗಳಲ್ಲಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಆದಷ್ಟು ಬೇಗ.

ಶ್ರೀ ಎಚ್. ಕೆ. ಸಿದ್ದಯ್ಯ.—ಇದು ಶರಣರು ಮಾಡಿದ ಜಾಗ. ಇದನ್ನು ಆದಷ್ಟು ಜಾಗ್ರತೆ ಪೊಸೆಸ್ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದರಲ್ಲಿ ಒಂದು ವಿಚಾರವಿದೆ. ಈ ಹರಿಜನರಹಾಗೇ ಜಮೀನಿಲ್ಲದ ಅನೇಕ ಬಡಜನರೂ ಅಲ್ಲಿದ್ದಾರೆ. ಅವರೂ ಸಹ ಜಮೀನಿಗೆ ಅರ್ಜಿ ಹಾಕಿಕೊಂಡಿದ್ದಾರೆ. ಆದರೆ ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರ ಸಲಹೆಯೂ ಮತ್ತು ಈ ಸಂಬಂಧದಲ್ಲಿ ರೆವಿನ್ಯೂ ಕಮಿಷನರ್ ಮಾಡಿರುವಂಥ ಸಲಹೆಯೂ ಒಂದಕ್ಕೊಂದಕ್ಕೆ ಒಡಂಬಡಿಕೆ ಆಗುತ್ತಿಲ್ಲ. ಆದಕಾರಣ ಈ ವಿಚಾರದಲ್ಲಿ ಒಂದು ಸೂಕ್ತ ನಿರ್ಧಾರಕ್ಕೆ ಬರಲು ಸ್ವಲ್ಪ ಕಾಲ ಬೇಕಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಹರಿಜನರಿಗೆ ಮೊದಲು ಕೊಟ್ಟು ಅನಂತರ ಉಳಿದುದನ್ನು ಬಾಕಿಯವರಿಗೂ ಕೊಡಿ. ಹೀಗೇಕೆ ಮಾಡಬಾರದು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಮ್ಮ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಪ್ರಯತ್ನ ಮಾಡಲಾಗುತ್ತದೆ.